# ಅಮೆರಿಕದಲ್ಲಿ ಸ್ವಾಮಿ ವಿವೇಕಾನಂದರು

ಆಂಗ್ಲ ಮೂಲ : ಮೇರಿ ಲೂಯಿ ಬರ್ಕ್

ಸಂಗ್ರಹಾನುವಾದ : ಸ್ವಾಮಿ ವೀರೇಶಾನಂದ

ಭಾಗ ೨೯

## ವೀರಯೋಧನ ಪುನರಾಗಮನ – ೨

ಸ್ವಾಮಿ ವಿವೇಕಾನಂದರು ಡೆಟ್ರಾಯ್ಟ್ ನಗರಕ್ಕೆ ಮತ್ತೆ ಆಗಮಿಸಿದ್ದಾರೆ. ತಮ್ಮ ಮೊದಲ ಭಾಷಣದಲ್ಲಿಯೇ ಟೀಕಾಕಾರರ ಬಾಯನ್ನು ಮುಚ್ಚಿಸಿದ್ದಾರೆ. ಅವರ ಸಮರ್ಥಕರ ಮನಸ್ಸಿನಲ್ಲಿ ಸಂತೋಷದ ಅಲೆಗಳನ್ನು ಎಬ್ಬಿಸಿದ್ದಾರೆ. ಅವರ ಪ್ರಬಲ ಅನುಯಾಯಿಗಳಲ್ಲಿ ಆಗರ್ಭ ಶ್ರೀಮಂತನಾಗಿದ್ದ ಥಾಮಸ್ ವಿಥೆರೆಲ್ ಪಾಮರ್ ಎಂಬುವವನು ಮುಖ್ಯನಾದವನು. ಆತನ ಬಂಗಲೆಯಲ್ಲಿ ಸ್ವಾಮೀಜಿ ಸ್ವಲ್ಪಕಾಲ ಉಳಿದುಕೊಂಡಿದ್ದರು. ಆತ ಬಹು ದೊಡ್ಡ ಉದ್ಯಮಶಾಲಿ. ಅಷ್ಟೇ ಅಲ್ಲ , ರಾಜಕೀಯದಲ್ಲಿ ಆಸಕ್ತಿ ಹೊಂದಿರುವವನು. ಅವನು ರಾಷ್ಟ್ರೀಯ ಸಭೆಯ ಸದಸ್ಯನಾಗಿದ್ದನು. ಆಗ ಮಹಿಳೆಯರ ವಿಮೋಚನೆಗಾಗಿ ಬಹಳಷ್ಟು ಪ್ರಯಾಸಪಟ್ಟನು. ಇದಲ್ಲದೆ, ಖಾಸಗಿ ಉದ್ಯಮಿಗಳ ಕಪಿಮುಷ್ಟಿಯಲ್ಲಿದ್ದ ರೈಲು ಮಾರ್ಗಗಳನ್ನು ಮುಕ್ತಗೊಳಿಸಿ, ರಾಷ್ಟ್ರೀಕರಣ ಮಾಡಲು ಹೋರಾಡಿದನು. 'ಎಲ್ಲರಿಗೂ ಸಮಾನವಾದ ಹಕ್ಕುಗಳಿರಬೇಕು; ಯಾರಿಗೂ ವಿಶೇಷ ಸವಲತ್ತುಗಳು ಇರಕೂಡದು' ಎಂಬ ಕನಸನ್ನು ಕಂಡು, ಅದಕ್ಕೆ ಹಾತೊರೆದವನು ಅವನು. ನಂತರ ಅವನನ್ನು ಸ್ಪೈನ್ ದೇಶದ ರಾಯಭಾರಿಯನ್ನಾಗಿ ನಿಯೋಜಿಸಲಾಯಿತು. ಅದಕ್ಕೆ ಅವನು ರಾಜಿನಾಮೆ ನೀಡಿದನು. ಆಮೇಲೆ, ಚಿಕಾಗೋದಲ್ಲಿ ನಡೆದ ಜಾಗತಿಕ ಕೊಲಂಬಿಯನ್ ವಸ್ತು ಪ್ರದರ್ಶನದ ಮುಖ್ಯ ಆಯುಕ್ತನಾಗಿ ಆಯ್ಕೆಯಾದನು. ಅದರ ಅಂಗವಾಗಿ ನಡೆದ ಸರ್ವಧರ್ಮ ಸಮ್ಮೇಳನದಲ್ಲಿ ಮೊದಲ ಬಾರಿಗೆ ಸ್ವಾಮಿ ವಿವೇಕಾನಂದರನ್ನು ಕಂಡನು; ಅವರ ಪ್ರತಿಭೆಯನ್ನು ಗುರುತಿಸಿದನು ಮತ್ತು ಅವರ ಕಟ್ಟಾ ಪ್ರಶಂಸಕನಾದನು.

ಪಾಮರ್‌ನದು ಬಹು ದೊಡ್ಡ ಬಂಗಲೆ. ಅಲ್ಲಿ ಸ್ವಾಮೀಜಿ ಉಳಿದುಕೊಂಡಿದ್ದರು. ಅವನು ಆಡಿಗಡಿಗೆ ಔತಣಕೂಟಗಳನ್ನು ಆಯೋಜಿಸುತ್ತಿದ್ದನು. ಪ್ರತಿಷ್ಠಿತ ಜನರನ್ನು ಆಹ್ವಾನಿಸುತ್ತಿದ್ದನು. ಈ ಔತಣಕೂಟಗಳಲ್ಲಿ ಭಾಗವಹಿಸಲು ಸ್ವಾಮೀಜಿಗೆ ಬಹಳ ಇರಿಸುಮುರಿಸು ಆಗುತ್ತಿತ್ತು. ಆದರೆ ಬೇರೆ ಗತಿಯಿರಲಿಲ್ಲ. ಅಲ್ಲಿ ನೆರೆಯುತ್ತಿದ್ದ ಪಟ್ಟಣದ ಗಣ್ಯವ್ಯಕ್ತಿಗಳನ್ನು ಕುರಿತು ಅವರು ಭಾಷಣ ಮಾಡುತ್ತಿದ್ದರು. ಅವರೊಡನೆ ಸೌಹಾರ್ದವಾಗಿ ಮಾತುಕತೆ ನಡೆಸುತ್ತಿದ್ದರು. ಆ ಜನರು ಕೂಡ ಸ್ವಾಮೀಜಿಯವರ ವಿದ್ವತ್ತು, ಸಭ್ಯತೆ ಇವುಗಳನ್ನು ಬಹುವಾಗಿ ಮೆಚ್ಚಿಕೊಂಡಿದ್ದರು. ಪ್ರಶಂಸೆಗಳ ಮಳೆಯನ್ನೇ ಸುರಿಸುತ್ತಿದ್ದರು.

ಒಂದು ತಮಾಷೆಯ ವಿಷಯವನ್ನು ಇಲ್ಲಿ ದಾಖಲಿಸಬೇಕು. ಪಾಮರ್‌ನ ಸೌಧದಲ್ಲಿ ಸ್ವಾಮೀಜಿಯವರ ಗೌರವಾರ್ಥ ನಡೆಯು



ತ್ತಿದ್ದ ಔತಣಕೂಟಗಳನ್ನು ಪತ್ರಿಕೆಗಳು ವಿಶೇಷವಾಗಿ ಬಿತ್ತರಿಸುತ್ತಿದ್ದವು. ಕೆಲವೊಮ್ಮೆ ಕಾಲ್ಪನಿಕ ವರದಿಗಳನ್ನೂ ಪ್ರಕಟಿಸುತ್ತಿದ್ದವು. ಸ್ವಾಮೀಜಿ ಇಂಥ ಒಂದು ವರದಿಯನ್ನು ಹೇಲ್ ಸಹೋದರಿಯರಿಗೆ ಬರೆದ ಪತ್ರದಲ್ಲಿ ಉಲ್ಲೇಖಿಸುತ್ತಾರೆ:

''ನಾನು ವೃದ್ಧ ಪಾಮರ್‌ನ ಜೊತೆಯಲ್ಲಿ ಹೇಗೋ ಸರಿದೂಗಿಸಿಕೊಂಡು ಹೋಗುತ್ತಿದ್ದೇನೆ. ಅತನು ಬಹಳವೇ ತಮಾಷೆಯ ಮನುಷ್ಯ. ಸಾಧುಸ್ವಭಾವದ ಮುದುಕ. ಇಲ್ಲಿ ಬಹಳ ಹಾಸ್ಯಾಸ್ಪದ ಸಂಗತಿಯೊಂದು ನಡೆಯಿತು. ಒಂದು ಪತ್ರಿಕೆ ಹೀಗೆ ವರದಿಮಾಡಿತು: 'ಈ ಬಿರುಗಾಳಿಯ ಹಿಂದೂ ಸಂನ್ಯಾಸಿಯು ಪಾಮರ್ ಅವರ ಅತಿಥಿಯಾಗಿದ್ದಾರೆ. ಪಾಮರ್ ಕೂಡ ಈಗ ಹಿಂದೂಧರ್ಮಕ್ಕೆ ಸೇರಿಬಿಟ್ಟಿದ್ದಾನೆ. ಅದಲ್ಲದೆ ಭಾರತಕ್ಕೆ ಕೂಡ ಹೋಗುವವನಿದ್ದಾನೆ. ಆದರೆ ಅವನು ಎರಡು ಷರತ್ತುಗಳನ್ನು ವಿಧಿಸಿದ್ದಾನೆ. ಜಗನ್ನಾಥನ ರಥವನ್ನು ಅವನ ಗೋಮಾಳದಲ್ಲಿ ಬೆಳೆಸಿದ ಹಸುಗಳಿಂದ ಎಳೆಸಬೇಕು ಎನ್ನುವುದು ಒಂದು. ಜೆರ್ಸಿ

ಹಸುವನ್ನು ಹಿಂದೂ ದೇವತೆಗಳ ಪಟ್ಟಿಯಲ್ಲಿ ಸೇರಿಸಿಕೊಳ್ಳಬೇಕು ಎನ್ನುವುದು ಇನ್ನೊಂದು.' .. ಇದನ್ನು ಓದಿ ನಾನು ಒಂದು ದಿನ ವಿಡೀ ನಗುತ್ತಲಿದ್ದೆ. ನಾಳೆ ಇನ್ನೊಂದು ಔತಣಕೂಟಕ್ಕೆ ಹೋಗ ಬೇಕಾಗಿದೆ..''

ಪಾಮರ್‌ನ 'ವೃದ್ಧರ ಕೂಟ'ವು ಡೆಟ್ರಾಯ್ಟ್ ನಗರದ ಪ್ರತಿಷ್ಠಿತ ನಾಗರಿಕರನ್ನು ಒಳಗೊಂಡಿತ್ತು. ಅವರೆಲ್ಲರೂ ಪಾಮರ್‌ನು ಮಾರ್ಚ್ ೧೫, ೧೮೯೪ರಂದು ನೀಡಿದ ಔತಣಕೂಟದಲ್ಲಿ ಭಾಗ ವಹಿಸಿದ್ದರು. ಈ ಸಮಾರಂಭದ ವರದಿಯ ತುಣುಕುಗಳನ್ನು ನಾವು ಡೆಟ್ರಾಯ್ಟ್ ಜರ್ನಲ್ ಪತ್ರಿಕೆಯ ಮಾರ್ಚ್ ೧೬ ಮತ್ತು ಫ್ರೀಪ್ರೆಸ್ ಜರ್ನಲ್ ಪತ್ರಿಕೆಯ ಮಾರ್ಚ್ ೧೭ ರ ಸಂಚಿಕೆಗಳಲ್ಲಿ ಕಾಣಬಹುದು. ಅಂದು ಸ್ವಾಮೀಜಿ ಬೌದ್ಧಧರ್ಮದ ವಿಷಯ ವಾಗಿ ಮಾತನಾಡಿದರು.

ಮರುದಿನ ಸಂಜೆ, ಅಂದರೆ, ಮಾರ್ಚ್ ೧೬ರಂದು, ಪಾಮರ್ ಸ್ವಾಮೀಜಿಯವರ ಗೌರವಾರ್ಥ ಇನ್ನೊಂದು ಔತಣ ಕೂಟವನ್ನು ಏರ್ಪಡಿಸಿದ್ದನು. ಅದಕ್ಕೆ ಆಮಂತ್ರಿಸಿದ್ದವರೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಆಗಿನ ಕಾಲದ ರಾಜಕೀಯದಲ್ಲಿ ಸಕ್ರಿಯವಾಗಿ ಇದ್ದವರು. ಅವರೆಲ್ಲ ಶ್ರೀಮಂತ ಉದ್ಯಮಿಗಳು. ಸಮಾಜಹಿತಕ್ಕಾಗಿ ರಾಜಕೀಯದಲ್ಲಿ ತೊಡಗಿಸಿಕೊಂಡಿದ್ದರು. ಸ್ವಾಮೀಜಿ ಅವರೆಲ್ಲರೊಡನೆ ಸೌಹಾರ್ದಯುತವಾದ ದೀರ್ಘ ಸಂವಾದವನ್ನು ನಡೆಸಿದರು.

ಇದಲ್ಲದೆ, ಇನ್ನೊಂದು ಮುಖ್ಯವಾದ ವಿಷಯ ಇಲ್ಲಿದೆ. ಪಾಮರ್‌ನ ಸ್ನೇಹವು ಸ್ವಾಮೀಜಿಯವರನ್ನು ಅವರಿಗೆ ಮೋಸ ಮಾಡಿದ್ದ ಕುಖ್ಯಾತ ಲೆಕ್ಚರ್ ಬ್ಯುರೋವಿನಿಂದ ಬಿಡಿಸಿತು. ಸ್ವಾಮೀಜಿಯವರ ಪ್ರವಚನಗಳಿಂದ ಗಳಿಸಿದ ಬಹಳಷ್ಟು ಹಣ ವನ್ನು ಬ್ಯೂರೋವಿನ ಮುಖ್ಯಸ್ಥನಾದ ಸ್ಲೇಟನ್ ಕೊಳ್ಳೆಹೊಡೆ ದಿದ್ದನು. ಅವರಿಗೆ ಸುಳ್ಳು ಆಶ್ವಾಸನೆಗಳನ್ನು ನೀಡಿ, ದಾರಿತಪ್ಪಿಸಿ ದ್ದನು. ಸ್ವಾಮೀಜಿ ತಮಗಾದ ಅನ್ಯಾಯವನ್ನು ಡೆಟ್ರಾಯ್ಟ್‌ನ ಸ್ನೇಹಿತರೊಂದಿಗೆ ಚರ್ಚಿಸಿದರೆಂದು ಕಾಣುತ್ತದೆ. ಈ ಬಗ್ಗೆ ಅವರು ಶ್ರೀಮತಿ ಹೇಲ್ ಅವರಿಗೆ ಬರೆದ ಪತ್ರದಲ್ಲಿ ವಿವರವಾಗಿ ತೋಡಿಕೊಂಡಿದ್ದಾರೆ. ಅದರಲ್ಲಿ ಅವರು ಹೀಗೆ ಬರೆದಿದ್ದಾರೆ:

'' ನಾನು ಈ ಸ್ಲೇಟನ್ನಿನ ವ್ಯವಹಾರದಿಂದ ಸಂಪೂರ್ಣವಾಗಿ ಕುಂದಿಹೋಗಿದ್ದೇನೆ. ಇದರಿಂದ ಬಿಡಿಸಿಕೊಳ್ಳಲು ಹೆಣಗಾಡು ತ್ತಿದ್ದೇನೆ. ಈ ದುಷ್ಟನ ಸಹವಾಸ ಮಾಡಿದ್ದರಿಂದ ನಾನು ಸುಮಾರು ೫,೦೦೦ ಡಾಲರುಗಳನ್ನು ಕಳೆದುಕೊಂಡೆ. ಈ ತರಹ ಭಾಷಣಗಳನ್ನು ಮಾಡುವವರು, ಪ್ರತಿಯೊಂದು ಭಾಷಣಕ್ಕೆ ಕಡಿಮೆಯೆಂದರೂ ಸಾವಿರ ಡಾಲರುಗಳನ್ನು ಗಳಿಸುತ್ತಾರೆ. ಎಲ್ಲ ನಗರಗಳಲ್ಲಿಯೂ ಹಾಗೆಯೇ ಇದೆ. ಆದರೆ ಈ ಎಲ್ಲ ಪಟ್ಟಣ ಗಳಲ್ಲಿಯೂ ಸ್ಲೇಟನ್ ನನಗೆ ವಂಚನೆ ಮಾಡಿದನು. ಭಗವಂತನ ಇಚ್ಛೆಯಂತೆ ಆಗಲಿ. ಅಮೆರಿಕದ ಜನರು ನನ್ನನ್ನು ಮೆಚ್ಚಿಕೊಂಡಿ ದ್ದನ್ನು ಕಂಡರೆ, ನಾನು ಇಷ್ಟರವರೆಗೆ ದೊಡ್ಡ ಮಟ್ಟದ ಹಣವನ್ನು ಗಳಿಸಬಹುದಾಗಿತ್ತು. ಆದರೆ ಲೆಕ್ಚರ್ ಬ್ಯುರೋವಿನ ಮುಖ್ಯಸ್ಥ ರಾದ ಜಿಮ್ಮಿ ಇರ್ವಿಂಗ್ ಮಿಲ್ಸ್ ಮತ್ತು ಸ್ಲೇಟನ್ ಇಬ್ಬರನ್ನೂ ಭಗವಂತನೇ ಹೀಗಾಗದಂತೆ ತಡೆಯಲು ಕಳಿಸಿದನೆಂದು ಕಾಣು ತ್ತದೆ. ಭಗವಂತನ ದಾರಿಗಳು ನಿಗೂಢವಾದುವು.

''ಆದರೆ ಒಂದು ಗೂಢಸಂಗತಿಯನ್ನು ನಾನು ನಿನಗೆ ಹೇಳ ಬೇಕು. ಸುಳ್ಳುಗಾರ ಸ್ಲೇಟನ್ನಿನ ಕಬಂಧ ಹಸ್ತದಿಂದ ನನ್ನನ್ನು ಬಿಡಿಸಲು ಪಾಮರ್ ಚಿಕಾಗೋ ನಗರಕ್ಕೆ ಹೋಗಿದ್ದಾನೆ. ಅವನು ಯಶಸ್ಸು ಗಳಿಸಲೆಂದು ನಾನು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ. ಹಲವಾರು ನ್ಯಾಯವಾದಿಗಳು ಲೆಕ್ಚರ್ ಬ್ಯೂರೋವಿನ ಈ ಒಪ್ಪಂದವನ್ನು ನೋಡಿದ್ದಾರೆ. ಅವರೆಲ್ಲರೂ ಇದೊಂದು ನಾಚಿಕೆ ಗೇಡಿನ ಮೋಸವೆಂದು ಹೇಳುತ್ತಾರೆ. ಇದನ್ನು ಯಾವುದೇ ಸಮಯದಲ್ಲಿ ಮುರಿಯಬಹುದೆಂದು ಅಭಿಪ್ರಾಯಪಡುತ್ತಾರೆ. ಆದರೆ ನಾನೊಬ್ಬ ಸಂನ್ಯಾಸಿ – ನನ್ನನ್ನು ನಾನು ಸ್ವರಕ್ಷಣೆ ಮಾಡಿ ಕೊಳ್ಳಲಾರೆ. ಆದ್ದರಿಂದ ಈ ಎಲ್ಲ ವ್ಯವಹಾರವನ್ನು ಕಿತ್ತೊಗೆದು, ಭಾರತಕ್ಕೆ ಹೋಗುವುದೇ ಒಳ್ಳೆಯದು ಎಂದು ನನಗೀಗ ತೋರು ತ್ತಿದೆ.''

ಪಾಮರ್ ಸ್ವಾಮೀಜಿಯವರನ್ನು ಲೆಕ್ಚರ್ ಬ್ಯೂರೋವಿನ ಮೂರು ವರ್ಷಗಳ ಒಪ್ಪಂದದಿಂದ ಬಿಡಿಸುವುದರಲ್ಲಿ ಯಶಸ್ವಿ ಯಾದನು. ಆದರೆ ಅದು ನಿಜವಾಗಲೂ ಕಷ್ಟದಾಯಕವಾಗಿತ್ತು. ಆದರೆ ಸ್ವಾಮೀಜಿಯವರಿಗಿದ್ದ ಪ್ರಭಾವಶಾಲಿ ಸ್ನೇಹವೃಂದದಿಂದ ಅದು ಸಾಧ್ಯವಾಯಿತು.

ಸ್ವಾಮೀಜಿ ಡೆಟ್ರಾಯ್ಟ್‌ನಲ್ಲಿ ಹೋಲ್ಡನ್ ಎನ್ನುವ ಹೊಸ ವ್ಯಕ್ತಿಯ ಜೊತೆಗೆ ಒಪ್ಪಂದ ಮಾಡಿಕೊಂಡರು. ಅವನು ಪ್ರಾಮಾ ಣಿಕನೇನೋ ಸರಿಯೇ, ಆದರೆ ಅವನಿಗೆ ಪ್ರವಚನಗಳನ್ನು ಏರ್ಪ ಡಿಸುವ ಸಾಮರ್ಥ್ಯ ಇರಲಿಲ್ಲ. ''ನನಗೆ ಕಡೆಯ ಪ್ರವಚನದಿಂದ ಸಿಕ್ಕಿದ್ದು ಬರೀ ೧೨೭ ಡಾಲರುಗಳು'' ಎಂದು ಸ್ವಾಮೀಜಿ ಒಂದು ಪತ್ರದಲ್ಲಿ ಬರೆಯುತ್ತಾರೆ. ಅದು ನಡೆದದ್ದು ೧೮೯೪ರ ಮಾರ್ಚ್ ೧೫ರಂದು, ಡೆಟ್ರಾಯ್ಟ್ ಒಪೆರಾ ಹಾಲಿನಲ್ಲಿ. ಸ್ವಾಮೀಜಿ ಮುಂದುವರಿದು ಹೇಳುತ್ತಾರೆ: ''ಭಾಷಣ ಕಾರ್ಯಕ್ರಮದ ವ್ಯವಸ್ಥೆ ಚೆನ್ನಾಗಿರಲಿಲ್ಲ. ಸಭಾಂಗಣದ ಬಾಡಿಗೆಯೇ ೧೫೦ ಡಾಲರುಗಳು. ನಾನೀಗ ಹೋಲ್ಡನ್ ಅನ್ನು ತ್ಯಜಿಸಿದ್ದೇನೆ. ಇಲ್ಲಿ ಇನ್ನೊಬ್ಬ ವ್ಯಕ್ತಿಯ ಜೊತೆ ಒಪ್ಪಂದ ಮಾಡಿಕೊಂಡಿದ್ದೇನೆ. ನೋಡೋಣ, ಅವನಾದರೂ ಉತ್ತಮವಾದ ಕೆಲಸ ಮಾಡುವ ನೇನೋ ಎಂದು.''

ಆ 'ಇನ್ನೊಬ್ಬ ವ್ಯಕ್ತಿ' ಉತ್ತಮ ಕಾರ್ಯವನ್ನು ಮಾಡಿ ದನೋ, ಇಲ್ಲವೋ ಎನ್ನುವುದು ನಮಗೆ ಗೊತ್ತಿಲ್ಲ. ಏನೇ ಇರಲಿ, ಒಂದಂತೂ ಸ್ವಾಮೀಜಿಯವರಿಗೆ ಮನದಟ್ಟಾಯಿತು. ತಾವು ತಮ್ಮ ಭಾರತದ ಕಾರ್ಯಕ್ಕೆ ದೊಡ್ಡ ಮಟ್ಟದ ಹಣವನ್ನು ಸಂಗ್ರ ಹಿಸುವುದು ಅಸಾಧ್ಯ ಎಂದು. ಇದಕ್ಕಾಗಿ ಸ್ವಾಮೀಜಿ ಹಲವು ತಿಂಗಳುಗಳ ಕಾಲ, ದಣಿವರಿಯದೆ, ಅಮೆರಿಕಾದಾದ್ಯಂತ ಸುತ್ತಾಡಿ, ಕೆಲಸದ ಜ್ವರವನ್ನು ಹತ್ತಿಸಿಕೊಂಡವರಂತೆ, ಪ್ರವಚನಗಳನ್ನು ಮಾಡಿದ್ದರು. ಅದನ್ನು ನೂರಾರು ಜನರು ಬಹುವಾಗಿ ಮೆಚ್ಚಿ

ಕೊಂಡಿದ್ದರು, ಕೂಡ. ಆದರೆ ಅವರಿಗೆ ಸಿಕ್ಕ ಪ್ರತಿಫಲ ಅತ್ಯಲ್ಪ. ಹೀಗಾಗಿ ೧೮೯೪ನೆಯ ಇಸವಿಯ ಮಾರ್ಚ್ ತಿಂಗಳ ಮೂರ ನೆಯ ವಾರದಂದು ಅವರು ಈ ಇಡೀ ಭಾಷಣ ಪ್ರವಾಸದ ವ್ಯವಸ್ಥೆಯ ವಿರುದ್ಧ ಸಿಡಿದುಬಿದ್ದಿದ್ದರು. ಈ ವಾರದಲ್ಲಿ ಅವರು ಬರೆದ ಎರಡು ಪತ್ರಗಳು ಈ ವಿರೋಧಿ ಭಾವನೆಯನ್ನು ಸ್ಪಷ್ಟ ವಾಗಿ ಎತ್ತಿತೋರಿಸುತ್ತವೆ. ಮೊದಲನೆಯ ಪತ್ರ ಅವರು ಬರೆದ್ದು ಮಾರ್ಚ್ ೧೫ರಂದು, ಹೇಲ್ ಸಹೋದರಿಯರಿಗೆ. ಎರಡ ನೆಯ ಪತ್ರವನ್ನು ಅವರು ಶ್ರೀಮತಿ ಹೇಲ್ ಅವರಿಗೆ ಬರೆದರು. ಈ ಪತ್ರಗಳಲ್ಲಿ ಬಹುತೇಕ ವಿಶ್ವಶಕ್ತಿಯನ್ನೇ ಅಭಿವ್ಯಕ್ತಿಗೊಳಿಸುವ ಸಾಮರ್ಥ್ಯವುಳ್ಳ ವ್ಯಕ್ತಿಯೊಬ್ಬರು ಶಿಶುಸಹಜ ಮುಗ್ಧತೆಯಿಂದ, ಒಬ್ಬ ಸಹೋದರನಂತೆ, ಒಬ್ಬ ಪುತ್ರನಂತೆ ತಮ್ಮ ಭಾವನೆಗಳನ್ನು ತೋಡಿಕೊಳ್ಳುವುದನ್ನು ನೋಡುತ್ತೇವೆ. ಸ್ವಾಮೀಜಿ ಹೀಗೆ ಬರೆಯುತ್ತಾರೆ:

''ನಾನು ಎಳ್ಳಷ್ಟೂ 'ಬಿರುಗಾಳಿ'ಯಲ್ಲ. ಅದಕ್ಕಿಂತ ಬಹು ದೂರ ನನ್ನ ಸ್ವಭಾವ. ನಾನು ಬಯಸುವುದು ಈ ಪ್ರಪಂಚವಲ್ಲ. ಈ ಬಿರುಗಾಳಿಯ ವಾತಾವರಣವನ್ನು ನಾನಿನ್ನು ಸಹಿಸಿಕೊಂಡಿರ ಲಾರೆನು. ಇದೇ ಪರಿಪೂರ್ಣತೆಯ ದಾರಿ : ನಾವು ಪರಿಪೂರ್ಣ ರಾಗಿರುವುದು ಮತ್ತು ಕೆಲವು ಮಂದಿ ಸ್ತ್ರೀಪುರುಷರನ್ನು ಪರಿ ಪೂರ್ಣರನ್ನಾಗಿ ಮಾಡುವುದು. ಒಳಿತನ್ನು ಮಾಡುವ ನನ್ನ ಭಾವನೆ ಹೀಗಿದೆ: ಕೆಲವು ಮಹಾನ್ ಚಾರಿತ್ರ್ಯವಂತರನ್ನು ಹುಟ್ಟು ಹಾಕುವುದು. ಹಂದಿಗಳ ಮುಂದೆ ರತ್ನಗಳನ್ನು ಎಸೆಯುವುದು ಕಾಲ ಮತ್ತು ಶಕ್ತಿಯ ಹರಣ ಮಾತ್ರ.

''ನಾನು ಪ್ರವಚನಗಳನ್ನು ಮಾಡುವುದಕ್ಕೆ ಎಳ್ಳಷ್ಟೂ ಬೆಲೆ ಕೊಡುವುದಿಲ್ಲ.. ಯಾವುದೋ ಒಬ್ಬ ವ್ಯಕ್ತಿಯ ಮತ್ತು ಒಂದು ವರ್ಗದ ಸಭಿಕರಿಗೆ ಸರಿಹೊಂದುವಂತೆ ಪ್ರಯತ್ನಿಸುವುದು ಬಹಳ ಅಸಹ್ಯಕರವಾದುದು. ಇಷ್ಟಾದರೂ ನಾನು ಚಿಕಾಗೋ ನಗರಕ್ಕೆ ಒಂದೆರಡು ದಿನಗಳ ಕಾಲ ಬಂದುಹೋಗುತ್ತೇನೆ. ನಂತರ ಈ ದೇಶದಿಂದ ಹೊರಟುಹೋಗುತ್ತೇನೆ. ಭಗವಂತನು ಎಲ್ಲರನ್ನೂ ಆಶೀರ್ವದಿಸಲಿ.''

ಸ್ವಾಮೀಜಿ ಈ ಸಂದರ್ಭದಲ್ಲಿ ತಮ್ಮ ಭಾರತೀಯ ಕಾರ್ಯಕ್ಕೆ ಹಣ ಸಂಗ್ರಹಿಸುವ ಉದ್ದೇಶವನ್ನು ಸರ್ವಥಾ ತ್ಯಜಿಸಿಬಿಟ್ಟರು. ಇದಲ್ಲದೆ, ಈ ಧ್ಯೇಯಕ್ಕಾಗಿ ತಾವು ಡೆಟ್ರಾಯ್ಟ್ ಸ್ನೇಹಿತರಿಂದ ಸಂಗ್ರಹಿಸಿದ ಹಣವನ್ನು ಹಿಂದಿರುಗಿಸಲು ಕೂಡ ಪ್ರಯತ್ನಿಸಿದರು. ಈ ಬಗ್ಗೆ ಅವರು ಶ್ರೀಮತಿ ಹೇಲ್ ಅವರಿಗೆ ಹೀಗೆ ಪತ್ರವನ್ನು ಬರೆಯುತ್ತಾರೆ: ''ನನ್ನ ಈ ಪ್ರಯತ್ನದಲ್ಲಿ ಸಫಲಹೊಂದುವ ಕಿಂಚಿತ್ತಾದರೂ ಅವಕಾಶ ಇಲ್ಲದಿರುವಾಗ, ನನಗೆ ನಿಮ್ಮ ಹಣವನ್ನು ಇಟ್ಟುಕೊಳ್ಳುವ ಅಧಿಕಾರ ಸ್ವಲ್ಪವೂ ಇಲ್ಲ. ಆದರೆ ಡೆಟ್ರಾಯ್ಟಿನ ನನ್ನ ಸ್ನೇಹಿತರು ಈ ಹಣವನ್ನು ತಿರುಗಿ ಪಡೆಯಲು ನಿರಾಕರಿಸಿದರು ಮಾತ್ರವಲ್ಲ , ನಾನು ಇಷ್ಟಪಟ್ಟರೆ, ಹಣವನ್ನು ನೀರಿನಲ್ಲಿ ಎಸೆದುಬಿಡಲು ಹೇಳಿದರು.''

ಭಾರತದ ಕಾರ್ಯಕ್ಕೆ ಆವಶ್ಯಕವಿರುವ ಹಣ ಲಭಿಸಿತೋ ಇಲ್ಲವೋ, ತಮ್ಮ ಉದ್ದೇಶದ ಅಲೆಯು ತಮ್ಮನ್ನು ಕರೆದೊಯ್ಯು ವುದಕ್ಕೆ ಸ್ವಾಮೀಜಿ ಮುಕ್ತವಾಗಿ ಬಿಟ್ಟುಬಿಟ್ಟರು. ಅವರು ೧೮೯೪ರ ಮಾರ್ಚ್ ೧೫ರಂದು ಶ್ರೀಮತಿ ಹೇಲ್ ಅವರಿಗೆ ಬರೆದ ಪತ್ರವು ಇದನ್ನು ಸ್ಪಷ್ಟಪಡಿಸುತ್ತದೆ:

''ನಾನು ಇಲ್ಲಿ (ಡೆಟ್ರಾಯ್ಟ್) ಸೋಮವಾರ ಮತ್ತು ಮತ್ತೆ ರಡು ಕಡೆಗಳಲ್ಲಿ ಮಂಗಳವಾರ ಮತ್ತು ಬುಧವಾರ ಪ್ರವಚನ ಗಳನ್ನು ನೀಡುವವನಿದ್ದೇನೆ.. ನಾನು ಯಾವುದಕ್ಕಾಗಿಯೂ ಆತಂಕಪಡುತ್ತಿಲ್ಲ. ಜೀವನವನ್ನು ಅನಾಯಾಸವಾಗಿ, ಸಹಜ ವಾಗಿ ತೆಗೆದುಕೊಳ್ಳುತ್ತಿದ್ದೇನೆ. ನನಗೆ ಬೋಸ್ಟನ್ ನಗರಕ್ಕೆ ಹೋಗು ವುದಕ್ಕಾಗಲಿ, ಅಥವಾ ಹೋಗದೆ ಇರುವುದಕ್ಕಾಗಲಿ ಯಾವ ನಿಶ್ಚಿತವಾದ ಬಯಕೆಯೂ ಇಲ್ಲ. ಯಾವುದು ಪ್ರಾಪ್ತವಾಗು ವುದೋ, ಯಾವ ಮನೋಭಾವ ಇರುತ್ತದೆಯೋ, ಆ ರೀತಿ ಇರುತ್ತೇನೆ. ಎಲ್ಲ ಕಡೆ, ಒಳ್ಳೆಯದು, ಇಲ್ಲವೇ ಕೆಟ್ಟದ್ದು ಆಗು ತ್ತದೆ. ನಾನು ಭಾರತಕ್ಕೆ ಹಿಂತಿರುವುದಕ್ಕೆ ಬೇಕಾದ ಪ್ರಯಾಣ ವೆಚ್ಚ ನನ್ನ ಹತ್ತಿರ ಈಗ ಇದೆ. ಈಗ ನನ್ನ ಕಾರ್ಯದ ಯೋಜನೆಗಳ ಕುರಿತಾಗಿ ಹೇಳುವುದಾದರೆ, ನನಗೀಗ ಪೂರ್ಣ ಅರಿವಾಗಿದೆ : ಈಗ ಇರುವ ರೀತಿಯಲ್ಲಿ ಕೆಲಸವು ಮುಂದುವರಿದರೆ, ಇದಕ್ಕೆ ಒಂದು ಸ್ವರೂಪವನ್ನು ನೀಡಲು ನಾನು ಇನ್ನೂ ನಾಲ್ಕು ಅಥವಾ ಐದು ಸಲ ಮತ್ತೆ ಬರಬೇಕಾಗಿ ಬರಬಹುದು.

''ಇತರರಿಗೆ ಬೋಧಿಸುವುದು ಮತ್ತು ಆ ಮೂಲಕ ಜಗತ್ತಿಗೆ ಹಿತವನ್ನು ಮಾಡುವುದು ಈ ಬಗ್ಗೆ ಹೇಳುವುದಾದರೆ, ಈ ಜಗತ್ತಿಗೆ ಏನನ್ನಾದರೂ ನಾನು ಬೋಧಿಸುವಂಥದ್ದು ಇದೆ ಎಂದು ನನ್ನನ್ನು ನಾನು ನಿಶ್ಚಯಪಡಿಕೊಳ್ಳಲು ನಾನು ವಿಫಲನಾಗಿದ್ದೇನೆ. ಹೀಗಾಗಿ ನಾನು ಈಗ ಬಹಳ ಆನಂದದಿಂದ ಇದ್ದೇನೆ ಮತ್ತು ಆರಾಮವಾಗಿ ಇದ್ದೇನೆ. ನಾನು ಬರಿ ನನ್ನ ಈ ಕೆಲಸದ ಜ್ವರದ ಬಗ್ಗೆ ಕನಸನ್ನು ಕಾಣುತ್ತಿದ್ದೇನೆ ಮತ್ತು ತಾತ್ತ್ವಿಕವಾಗಿ ಯೋಚಿಸು ತ್ತಿದ್ದೇನೆ. ಈಗ ನನಗೆ ಗೊತ್ತಾಗಿದೆ. ಇದೆಲ್ಲವೂ ಅಸಂಬದ್ಧ ವಾದುದು ಎಂದು. ನಾನು ಏನೂ ಅಲ್ಲ ; ಈ ಜಗತ್ತು ಏನೂ ಅಲ್ಲ. ಪರಮಾತ್ಮನೊಬ್ಬನೇ ನಿಜವಾದ ಕೆಲಸಗಾರ. ನಾವೆಲ್ಲರೂ ಅವನ ಕೈಯಲ್ಲಿನ ಯಂತ್ರಗಳು ಮಾತ್ರ.''

ಸ್ವಾಮಿ ವಿವೇಕಾನಂದರು ತಮ್ಮ ಭಾರತದ ಕಾರ್ಯಕ್ಕಾಗಿ ಎಷ್ಟು ಹಣವನ್ನು ಸಂಗ್ರಹಿಸಿದರು ಎಂದು ಊಹೆ ಮಾಡಲೂ ಅಸಾಧ್ಯ. ಒಂದಂತೂ ನಿಜ. ಮಾರ್ಚ್ ೧೮೯೪ರ ಸುಮಾರಿಗೆ ಅವರಿಂದ ಹೆಚ್ಚೇನೂ ಮೊತ್ತವನ್ನು ಸಂಗ್ರಹಿಸಲು ಸಾಧ್ಯವಾಗಲೇ ಇಲ್ಲ. ಕೆಲವು ಉದಾರ ದಾನಿಗಳ ದೇಣಿಗೆಯನ್ನು ಮಾತ್ರ ಇಲ್ಲಿ ಉಲ್ಲೇಖಿಸಬಹುದು. ಫ್ರೀರ್ ಎನ್ನುವವನು ೨೦೦ ಡಾಲರುಗಳನ್ನು ಕೊಟ್ಟನು. ಒಬ್ಬ ಭದ್ರಮಹಿಳೆಯು ೧೦೦ ಡಾಲರುಗಳನ್ನು ನೀಡಿ ದಳು. ಡೆಟ್ರಾಯ್ಟ್ ನಗರದ ಪಾಮರ್ ಮತ್ತು ಆತನ ಉದ್ಯಮಿ ಮಿತ್ರರು ಬಹಳಷ್ಟು ಹಣವನ್ನು ನೀಡಿರಬಹುದು. ಆದರೆ ಅದೆಷ್ಟು ಎಂದು ನಮಗೆ ಗೊತ್ತಿಲ್ಲ.

*(ಮುಂದುವರಿಯುವುದು)*